ನಿಮ್ಮೊಡನೆ

# ಉತ್ತರವಿಲ್ಲದ ಪ್ರಶ್ನೆಗಳು

ಗ್ರಾಮೀಣ ಆರ್ಥಿಕತೆಯ ಬೆನ್ನೆಲುಬಾದ ಸಹಕಾರಿ ಬ್ಯಾಂಕುಗಳಲ್ಲೇಕೆ ನೋಟುಗಳ ವಿನಿಮಯ ನಡೆಯುತ್ತಿಲ್ಲ? ಹಳ್ಳಿಗರ ನಂಬಿಕೆಯನ್ನು ಗಳಿಸಿರುವ, ಜನಸಾಮಾನ್ಯರ ಜತೆಗೆ ವ್ಯಾಪಾರಕ್ಕಿಂತ ಮಿಗಿಲಾದ ಸ್ನೇಹವನ್ನು ಇಟ್ಟುಕೊಂಡಿರುವ ಸಣ್ಣ ಪುಟ್ಟ ವ್ಯಾಪಾರಿಗಳನ್ನು ಒಕ್ಕಲೆಬ್ಬಿಸಿ, ಮಾಲ್‌ಗಳನ್ನು ಸ್ಥಾಪಿಸಿರುವ ಬಹುರಾಷ್ಟ್ರೀಯ ಕಂಪೆನಿಗಳನ್ನು ಉದ್ಧಾರ ಮಾಡಲೆಂದೇ ಈ ಕ್ರಮವನ್ನು ಸರ್ಕಾರ ಕೈಗೊಂಡಿದೆಯೆ?

ಐದುನೂರು ಮತ್ತು ಸಾವಿರ ರೂಪಾಯಿ ನೋಟುಗಳನ್ನು ನಿಷೇಧಿಸಿ, ಹತ್ತು ದಿನಗಳಾದ ಬಳಿಕವೂ ಜನರ ಬವಣೆ ತಪ್ಪಿಲ್ಲ. ಎರಡು ಲಕ್ಷಕ್ಕೂ ಹೆಚ್ಚು ಬ್ಯಾಂಕ್ ಎಟಿಎಂಗಳಲ್ಲಿ ಅರ್ಧಕ್ಕರ್ಧ ಇನ್ನೂ ಬಾಗಿಲು ಹಾಕಿಕೊಂಡಿವೆ. ಬ್ಯಾಂಕಿನಲ್ಲಿ ತಾವೇ ಇಟ್ಟ ಹಣವನ್ನು ಮರಳಿ ಪಡೆಯಲು ಲಕ್ಷಾಂತರ ಜನರು ಕ್ಯೂಗಳಲ್ಲಿ ನಿಂತಿರುವ ದೃಶ್ಯ ಸರ್ವೇಸಾಮಾನ್ಯವಾಗಿದೆ. ನೂಕುನುಗ್ಗಲಿನ ಮಧ್ಯೆ ಒಟ್ಟು 55 ಜನರು ಸಾವನ್ನಪ್ಪಿದ್ದಾರೆ. ಹಳೇ ನೋಟುಗಳನ್ನು ಮರಳಿಸಿ ಹೊಸ ನೋಟುಗಳನ್ನು ಪಡೆಯುವ ಪ್ರಕ್ರಿಯೆಯೂ ನಿಧಾನವಾಗಿ ನಡೆಯುತ್ತಿದೆ. ಪರಿಣಾಮವಾಗಿ ಮಾರುಕಟ್ಟೆಗೆ ಹೊಡೆತ ಬಿದ್ದಿದೆ. ಲಕ್ಷಾಂತರ ಸಣ್ಣ ವ್ಯಾಪಾರಿಗಳು ಕಂಗಾಲಾಗಿದ್ದಾರೆ. 'ಐವತ್ತು ದಿನಗಳ ಅವಧಿ ಕೊಡಿ. ಎಲ್ಲವೂ ಸರಿಯಾಗುತ್ತದೆ' ಎಂದು ಪ್ರಧಾನಮಂತ್ರಿಯವರು ಸಾರ್ವಜನಿಕ ಸಭೆಯಲ್ಲಿ ದೇಶದ ಜನರಿಗೆ ಮನವಿ ಮಾಡಿಕೊಂಡಿದ್ದಾರೆ. ಅರ್ಥವ್ಯವಸ್ಥೆಯಲ್ಲಿ ದೊಡ್ಡದೊಂದು ಬದಲಾವಣೆ ನಡೆಸಲು ಹೊರಟಾಗ ಹೀಗೆ ಜನರು ತೊಂದರೆ ಅನುಭವಿಸುವುದು ಅನಿವಾರ್ಯ ಎಂದು ದೇಶದ ಹಣಕಾಸು ಸಚಿವರು ಹೇಳಿದ್ದಾರೆ. ಜನರ ನೂಕುನುಗ್ಗಲನ್ನು ನಿಯಂತ್ರಿಸಿ ಎಲ್ಲರಿಗೂ ಸೇವೆ ಒದಗಿಸಲು ಲಕ್ಷಾಂತರ ಬ್ಯಾಂಕ್ ಸಿಬ್ಬಂದಿ ಕಷ್ಟಪಟ್ಟು ಕೆಲಸ ಮಾಡುತ್ತಿದ್ದಾರೆ.

ನೋಟುಗಳ ರೂಪದಲ್ಲಿರುವ ಕಪ್ಪುಹಣವನ್ನು ನಿಗ್ರಹಿಸುವುದಕ್ಕಾಗಿ, 500 ಮತ್ತು ಸಾವಿರದ ನೋಟುಗಳನ್ನು ನಿಷೇಧಿಸಲಾಗಿದೆ ಎನ್ನುವುದು ಕೇಂದ್ರ ಸರ್ಕಾರದ ವಾದ. ಭಾರತೀಯ ರಿಸರ್ವ್ ಬ್ಯಾಂಕ್‌ನ ಹೇಳಿಕೆಯಂತೆ, ದೇಶದಲ್ಲಿ ಒಟ್ಟು ಕಪ್ಪುಹಣದ ಶೇಕಡಾ 6ರಷ್ಟು ಮಾತ್ರ ನಗದು ರೂಪದಲ್ಲಿದೆ. ಉಳಿದ ಕಪ್ಪು ಹಣವು ಚಿನ್ನ, ಆಸ್ತಿ, ಷೇರುಗಳು ಮತ್ತು ವಿದೇಶೀ ಹೂಡಿಕೆಯ ರೂಪದಲ್ಲಿವೆ. 'ಕೇವಲ ಶೇಕಡಾ 6ರಷ್ಟು ನಗದು ರೂಪದಲ್ಲಿ ಇರುವ ಕಪ್ಪುಹಣವನ್ನು ನಿಗ್ರಹಿಸಲು ಕೋಟ್ಯಂತರ ಜನರನ್ನು ಹೀಗೆ ಬೀದಿಗೆ ತಳ್ಳುವುದು ಸರಿಯೆ?' ಎನ್ನುವುದು ಜನಸಾಮಾನ್ಯರ ಪ್ರಶ್ನೆ. 'ಮೊದಲು ರಿಯಲ್ ಎಸ್ಟೇಟ್, ಚಿನ್ನ, ಷೇರುಗಳ ರೂಪದಲ್ಲಿ ಇರುವ ಕಪ್ಪುಹಣವನ್ನು ಬಯಲಿಗೆಳೆಯಿರಿ' ಎನ್ನುವುದು ವಿರೋಧಪಕ್ಷಗಳ ಟೀಕಾಸ್ತ್ರ.

ಕಪ್ಪು ಹಣವನ್ನು ನಿಗ್ರಹಿಸಬೇಕು ಎನ್ನುವುದರ ಬಗ್ಗೆ ಯಾರದೂ ವಿರುದ್ಧ ಮಾತಿಲ್ಲ. ಆದರೆ ಈ ಕ್ರಮವನ್ನು ಕೈಗೊಳ್ಳುವಾಗ ಜನಸಾಮಾನ್ಯರಿಗೆ ತೊಂದರೆ ಆಗದಂತೆ ಹೆಚ್ಚು ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗಿತ್ತು. ಒಟ್ಟು ಹಣದ ಪ್ರಮಾಣದಲ್ಲಿ ಶೇಕಡಾ 86ರಷ್ಟು 500 ಮತ್ತು ಸಾವಿರದ ನೋಟುಗಳ ಮೌಲ್ಯವೇ ಇತ್ತು. ಅಷ್ಟೂ ಹಣವನ್ನು ನಿಷೇಧ ಮಾಡುವಾಗ ನಿಜಕ್ಕೂ ತುಂಬ ಜಾಗ್ರತೆಯಿಂದ, ಮಾರುಕಟ್ಟೆಯಲ್ಲಿ ಹಣದ ಕೊರತೆಯಾಗದಂತೆ ಯೋಜನೆಯನ್ನು ಜಾರಿಗೊಳಿಸಬೇಕಿತ್ತು.

ಕೆಟ್ಟ ಹಣ, ಕಪ್ಪು ಹಣ, ನಕಲಿ ಹಣ ಎಲ್ಲವೂ ಆರ್ಥಿಕತೆಗೆ ಕೆಟ್ಟದ್ದು. ಸರ್ಕಾರಕ್ಕೆ ತೆರಿಗೆ ತಪ್ಪಿಸಿ ಒಟ್ಟುಗೂಡಿಸುವ ಹಣ, ನಕಲಿ ನೋಟುಗಳನ್ನು ಮುದ್ರಿಸುವ ಮೂಲಕ ವಂಚಿಸಿದ ಹಣ ಎಲ್ಲವನ್ನೂ ನಿರ್ಮೂಲಗೊಳಿಸಲೇಬೇಕು. ಇಲ್ಲವಾದಲ್ಲಿ ದೇಶದ ಆರ್ಥಿಕತೆಗೆ ಅಪಾಯ ತಪ್ಪಿದ್ದಲ್ಲ. ಆದರೆ 'ಜನರ ಗೋಳನ್ನು ಕೋರ್ಟ್‌ಗಳಲ್ಲದೆ ಇನ್ನಾರು ಕೇಳಬೇಕು? ಜನರನ್ನು ಇಷ್ಟೊಂದು ಗೋಳು ಹೊಯ್ದುಕೊಂಡರೆ ದಂಗೆ ಎದ್ದಾರು' ಎಂದು ಸುಪ್ರೀಂಕೋರ್ಟ್ ಕೂಡಾ ಗರಂ ಆಗಿ ಎಚ್ಚರಿಕೆ ನೀಡುವಷ್ಟು ಅರಾಜಕತೆ ಉಂಟಾಗಿರುವುದು ಅಕ್ಷಮ್ಯ. ಜನರಿಗೆ ಸಹಜವಾಗಿಯೇ ಸಿಟ್ಟು ಬಂದಿದೆ. ಬರೀ 2000 ರೂಪಾಯಿ ಪಡೆಯಲು ಬ್ಯಾಂಕುಗಳ ಮುಂದೆ ಗಂಟೆಗಟ್ಟಳೆ ಕ್ಯೂನಲ್ಲಿ ನಿಲ್ಲಬೇಕೆ? ಅದೂ ನಮ್ಮ ಹಣವನ್ನು ನಾವೇ ತೆಗೆದುಕೊಳ್ಳಲು ಭಿಕ್ಷುಕರಂತೆ ಕಾಯಬೇಕೆ? ನ್ಯಾಯವಾಗಿ ದುಡಿದ ಹಣವನ್ನು ಕಳ್ಳಹಣ ಎಂದು ಸರಕಾರ ಭಾವಿಸಿದರೆ ಯಾರಿಗೆ ತಾನೆ ಸಿಟ್ಟು ಬರುವುದಿಲ್ಲ?

ಸರ್ಕಾರದ ಈ ಕ್ರಮ ಇನ್ನೂ ಹಲವು ಪ್ರಶ್ನೆಗಳನ್ನು ಎತ್ತಿದೆ. 'ಸರ್ಕಾರದ ಬಳಿ ವಿದೇಶಗಳಲ್ಲಿ ಕಳ್ಳಹಣ ಕೂಡಿಟ್ಟವರ ದೊಡ್ಡ ಪಟ್ಟಿಯೇ ಇದೆ. ಅವರ ಮೇಲೆ ಏಕೆ ಕ್ರಮ ಕೈಗೊಂಡಿಲ್ಲ?' ಎನ್ನುವುದು ಪ್ರಮುಖ ಪ್ರಶ್ನೆ. ನಮ್ಮ ಸಮಾಜ ಪೂರ್ಣ ನಗದುರಹಿತ ವಹಿವಾಟಿಗೆ ಸಿದ್ಧವಾಗಿದೆಯೆ? ಗ್ರಾಮೀಣ ಆರ್ಥಿಕತೆ ಇವತ್ತಿಗೂ ನಗದಿನ ಮೇಲೆಯೇ ನಡೆಯುತ್ತಿರುವುದು ಸರ್ಕಾರಕ್ಕೆ ಗೊತ್ತಿಲ್ಲವೆ? ಹೀಗೆ ಒಮ್ಮಿಂದೊಮ್ಮೆಲೆ ನಗದುರಹಿತ ಆರ್ಥಿಕತೆಗೆ ಜಿಗಿಯಲು ಹೊರಟರೆ ಕೋಟ್ಯಂತರ ಜನರು ತೊಂದರೆ ಅನುಭವಿಸುತ್ತಾರೆ ಎನ್ನುವುದು ಸರ್ಕಾರಕ್ಕೆ ಏಕೆ ಹೊಳೆಯಲಿಲ್ಲ? ಗ್ರಾಮೀಣ ಆರ್ಥಿಕತೆಯ ಬೆನ್ನೆಲುಬಾದ ಸಹಕಾರಿ ಬ್ಯಾಂಕುಗಳಲ್ಲೇಕೆ ನೋಟುಗಳ ವಿನಿಮಯ ನಡೆಯುತ್ತಿಲ್ಲ? ಹಳ್ಳಿಗರ ನಂಬಿಕೆಯನ್ನು ಗಳಿಸಿರುವ, ಜನಸಾಮಾನ್ಯರ ಜತೆಗೆ ವ್ಯಾಪಾರಕ್ಕಿಂತ ಮಿಗಿಲಾದ ಸ್ನೇಹವನ್ನು ಇಟ್ಟುಕೊಂಡಿರುವ ಸಣ್ಣ ಪುಟ್ಟ ವ್ಯಾಪಾರಿಗಳನ್ನು ಒಕ್ಕಲೆಬ್ಬಿಸಿ, ಮಾಲ್‌ಗಳನ್ನು ಸ್ಥಾಪಿಸಿರುವ ಬಹುರಾಷ್ಟ್ರೀಯ ಕಂಪೆನಿಗಳನ್ನು ಉದ್ಧಾರ ಮಾಡಲೆಂದೇ ಹೀಗೆ ದಿಢೀರ್ ಕ್ರಮವನ್ನು ಸರ್ಕಾರ ಕೈಗೊಂಡಿದೆಯೆ?– ಹೀಗೆ ಜನರ ಮುಂದೆ ನೂರೆಂಟು ಪ್ರಶ್ನೆಗಳಿವೆ. ಯಾವ ಪ್ರಶ್ನೆಗಳಿಗೂ ಸೂಕ್ತ ಉತ್ತರ ಸಿಕ್ಕುತ್ತಿಲ್ಲ.

■ ಬಿ.ಎಂ.ಹನೀಫ್



ಈಶ್ವರ್